# ಭಾರೀ ಪೇಟ!



ಈತನ ಹೆಸರು ದೇವತಸಿಂಗ್ ಅವತಾರಸಿಂಗ್ ಮೌನಿ. ಹೆಸರಿನಂತೆ ಈತನ ಪೇಟ ವಸ್ತ್ರವೂ ತುಂಬ ಉದ್ದ. ಸುಮಾರು 645 ಮೀಟರ್ ಉದ್ದದ ಮುಂಡಾಸನ್ನು ಬಹುಶಃ ಜಗತ್ತಿನಲ್ಲಿ ಯಾರೂ ಸುತ್ತುವುದಿಲ್ಲ. ಹೀಗಾಗಿ ಈತ ಗಿನ್ನೆಸ್ ದಾಖಲೆ ಸೇರಲಿದ್ದಾನೆ. ಸಾಮಾನ್ಯವಾಗಿ ಸಿಖ್ ಸಮುದಾಯದವರು 5 ರಿಂದ 7 ಮೀಟರ್ ಉದ್ದದ ಪೇಟ ಧರಿಸುತ್ತಾರೆ.

60 ವರ್ಷದ ಮೌನಿ ಕಳೆದ 16 ವರ್ಷಗಳಿಂದ ನಿರಂತರವಾಗಿ ಭಾರಿ ಗಾತ್ರದ ಪಗಡಿಯನ್ನು ಧರಿಸುತ್ತ ಬಂದಿದ್ದಾನೆ. ಓರಣವಾಗಿ ಸುತ್ತಿಕೊಳ್ಳಲು ಈತ ನಿತ್ಯ 6 ಗಂಟೆಗಳಷ್ಟು ಕಾಲ ಕಳೆಯುತ್ತಾನೆ. ಈ ಪಗಡಿಯ ಒಟ್ಟು ತೂಕ 100 ಪೌಂಡ್ ಅಂದರೆ, 45 ಕಿಲೋಗಿಂತ ಸ್ವಲ್ಪ ಹೆಚ್ಚು. ಹಂತ ಹಂತವಾಗಿ ಮನೆ ಕಟ್ಟುವಂತೆ ಹಂತ ಹಂತವಾಗಿ ಸುತ್ತುತ್ತ ಆತ ಪೇಟವನ್ನು ಮೇಲೇರಿಸುತ್ತಾನೆ. ಅದಕ್ಕಾಗಿ ನೀಲಿ ಹಾಗೂ ಕೇಸರಿ ಬಣ್ಣದ ಬಟ್ಟೆಗಳನ್ನು ಬಳಸುತ್ತಾನೆ. ಈ ಬಟ್ಟೆಗಳ ತೂಕವೇ ಸುಮಾರು 30 ಕಿಲೋ.

ಇದರೊಂದಿಗೆ ಸುಮಾರು 15 ಕಿಲೋ ತೂಕದ ಅಲಂಕಾರಿಕ ವಸ್ತುಗಳು ಸೇರಿಕೊಳ್ಳುತ್ತವೆ. ತಲೆಯ ಮೇಲಿನ ಭಾರದ ಜತೆಗೆ ಕೈಗಳಲ್ಲಿರುವ ದೊಡ್ಡ ಗಾತ್ರದ ಕಡಗಗಳು, ಖಡ್ಗ ಸೇರಿದರೆ ಅವುಗಳ ತೂಕ ಸುಮಾರು 40 ಕಿಲೋ. ಅಂದಾಜು ಒಂದು ಕ್ವಿಂಟಾಲ್ ಭಾರವನ್ನು ಮೌನಿ ಹೊತ್ತು ತಿರುಗುತ್ತಾನೆಂದರೆ ಅದು ನಿಜಕ್ಕೂ ಅಚ್ಚರಿಯ ಸಂಗತಿಯೇ!

ಮೌನಿ ಮೊದಲು 150 ಮೀಟರ್ ಉದ್ದದ ಬಟ್ಟೆಯಿಂದ ಪೇಟ ಕಟ್ಟಿಕೊಳ್ಳಲು ಆರಂಭಿಸಿದ. ನಂತರ 250 ಮೀಟರ್, 365 ಮೀಟರ್ ಉದ್ದದ ಬಟ್ಟೆ ಸುತ್ತಿಕೊಳ್ಳತೊಡಗಿದ. ದಾಖಲೆಗಾಗಿ ಪೇಟದ ಉದ್ದವನ್ನು ಹೆಚ್ಚಿಸತೊಡಗಿದ. ಈಗ ಅದು 645 ಮೀಟರಿಗೆ ಏರಿದೆ. ಈ ಮೊದಲು ವಿಶ್ವದಾಖಲೆ ಮಾಡಿದ ಮೇಜರ್ ಸಿಂಗ್ 400 ಮೀಟರ್ ಉದ್ದದ ಪೇಟ ಧರಿಸುತ್ತಿದ್ದನಂತೆ. ಈಗ ಮೌನಿ ಈ ದಾಖಲೆ ಮುರಿಯುವ ಆತುರದಲ್ಲಿದ್ದಾನೆ.

■ ಸುಭಾಸ ಯಾದವಾಡ



